ಸಾಕ್ಷಿಯನ್ನು ಇಂದು ದಿ**: 28-01-2025** ರಂದು ಕರೆಸಿ**,** ಪ್ರಮಾಣ ವಚನ ಬೋಧಿಸಲಾಯಿತು**.**

**:-**ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ**:-**

1. ಸಾಕ್ಷಿಯು 2 ನೇ ಆರೋಪಿಯನ್ನು ನೋಡಿ ಗುರ್ತಿಸುತ್ತಾರೆ.

(ಹಂತದಲ್ಲಿ ಸಾಕ್ಷಿಯನ್ನು ಭಾಗಶ:/ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿರಿಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು).

ಪಾಟೀ ಸವಾಲು**:** ಹಿರಿಯ ಸಸಅ ವಕೀರಿಂದ**:**

2. 1 ನೇ ಆರೋಪಿ ಚಾಸಾ-1 ರವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಜಿಂಜಾಮುಷ್ಟಿ ಮಾಡಿ ಅವಮಾನ ಪಡಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು**:** ಆರೋಪಿತರ ಪರ ಶ್ರೀ**:** ಪಿ**.** ಜೆ**.** ವಕೀಲರಿಂದ**:**

3. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ದಿ: 13-10-2021 ರಂದು ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ನನ್ನ ಹೇಳಿಕೆ ಕನ್ನಡದಲ್ಲಿ ಇರುವುದರಿಂದ ನನಗೆ ಅದರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಪೊಲೀಸರು ನನಗೆ ಓದಿ ಹೇಳಿದ್ದಾರೆ ಎನ್ನುತ್ತಾರೆ. 1 ನೇ ಆರೋಪಿಗೆ ನಮ್ಮ ಅಂಗಡಿಯಲ್ಲಿ ರೇಷನ್ ಕಾರ್ಡ್ ಇದೆ ಎಂದರೆ ಸರಿ. ಪ್ರತಿ ತಿಂಗಳು ನಮ್ಮ ಅಂಗಡಿಯಲ್ಲಿ ರೇಷನ್ ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ.

4. ನಾನು ಸರಿಯಾಗಿ ರೇಷನ್ ಕೊಡುವುದಿಲ್ಲ ಎಂದು ರೇಷನ್ ಕಾರ್ಡ್ ದಾರರು ಮೇಲಾಧಿಕಾರಿಗಳಿಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸಹ ನಾನು ಸರಿಯಾಗಿ ರೇಷನ್ ಕೊಡದೇ ಇದುದ್ದರಿಂದ ಮೇಲಾಧಿಕಾರಿಗಳಿಗೆ ದೂರು ನೀಡಿರುತ್ತಾನೆ ಎಂದರೆ ಸರಿಯಲ್ಲ. ಆ

ಕಾರಣಕ್ಕೆ ನನ್ನ ಮತ್ತು 1 ನೇ ಆರೋಪಿತನ ಮಧ್ಯ ಒಂದೆರಡು ಬಾರಿ ಬಾಯಿ ಮಾತಿನ ಜಗಳವಾಗಿತ್ತು ಎಂದರೆ ಸರಿ. ಬೇರೆ ಕಾರ್ಡ್ ದಾರರ ಮುಂದೆ 1 ನೇ ಆರೋಪಿಗೆ ನಾನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿದ್ದಕ್ಕೆ ನಾನು ಮತ್ತು ಚಾಸಾ-1 ರವರು 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ವಿರುದ್ಧ ದೂರು ನೀಡುತ್ತಾರೆ ಎಂದು ಅವರಿಗಿಂತ ಮೊದಲೇ ಹೋಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

5. 2 ನೇ ಆರೋಪಿ ನನಗೆ ಕೈಯಿಂದ ಮೂಗಿನ ಮೇಲೆ ಹಲ್ಲೆ ಮಾಡಿರುತ್ತಾನೆ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-4 ರವರ ಮೂಲಕ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ಸಹಾಯವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧೀಕಾರಿಗಳು, ಬೀದರ.